# <u>ಪರಿಷ್ಕೃತ ವೇಳಾಪಟ್ಟಿ.</u>

**2017–18ನೇ ಸಾಲಿನ ಆನ್‌ಲೈನ್ ಇಂಟರಾಕ್ಟೀವ್–ಕೌನ್ಸಲಿಂಗ್ [ ONLINE INTERACTIVE COUNCELLING ] ಮೂಲಕ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪರಿಷ್ಕೃತ ವೇಳಾಪಟ್ಟಿ.**

| ಕ್ರ. ಸಂ | ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದ ವಿವರ | ನಿಗಧಿಪಡಿಸಲಾಗಿದ್ದ ವೇಳಾಪಟ್ಟಿ | ಪರಿಷ್ಕೃತ ವೇಳಾಪಟ್ಟಿ |
|---|---|---|---|
| 1. | **2017–18ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶಗಳಿಗೆ ಅಧಿಸೂಚನೆ** | 09–05–2017 | **09–05–2017** |
| 2. | ಪ್ರಥಮ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳು ಅರ್ಜಿ ನಮೂನೆ ಹಾಗೂ ಮಾಹಿತಿ ಪುಸ್ತಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಕೃತ ವೆಬ್‌ಸೈಟ್‌ಗಳ ಮೂಲಕ www.kea.kar.nic.in & www.dte.kar.nic.in ಪಡೆಯುವುದು ಹಾಗೂ ಸಮೀಪದ 121 ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಆನ್‌ಲೈನ್ ಅರ್ಜಿಗಳ ಭರ್ತಿ/ದಾಖಲೆಗಳ ಪರಿಶೀಲನಾ ಕೇಂದ್ರ" (Online Application Submission / Document Verification Center)" ಗಳಲ್ಲಿ ಮಾಹಿತಿ ಪಡೆಯುವುದು. (ಮಾಹಿತಿ ಪುಸ್ತಕದಲ್ಲಿನ **Annexure – XIII** ನ್ನು ನೋಡುವುದು) | 10–05–2017 ರಿಂದ 25–05–2017 ರವರೆಗೆ (ಬೆಳಿಗ್ಗೆ 10.00 ರಿಂದ ಸಂಜೆ 5.30ರವರೆಗೆ) | **<u>07–06–2017 ರವರೆಗೆ</u> (ಬೆಳಿಗ್ಗೆ 10.00 ರಿಂದ ಸಂಜೆ 5.30ರವರೆಗೆ)** |
| 3. | ಕರ್ನಾಟಕ ರಾಜ್ಯದ ಯಾವುದೇ STATE BANK OF INDIA ಶಾಖೆಗಳಲ್ಲಿ ನಿಗಧಿತ ಅರ್ಜಿ ನೋಂದಣಿ ಶುಲ್ಕ ಪಾವತಿಸಿ BANK CHALLAN (counterfoil) ನ್ನು ಪಡೆದು ಸಮೀಪದ 121 ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಆನ್‌ಲೈನ್ ಅರ್ಜಿಗಳ ಭರ್ತಿ/ದಾಖಲೆಗಳ ಪರಿಶೀಲನಾ ಕೇಂದ್ರ" (Online Application Submission / Document Verification Center)" ಗಳಲ್ಲಿ ಸಲ್ಲಿಸಿ ಸ್ವತಃ ಭರ್ತಿ ಮಾಡಿದ ಅರ್ಜಿಯಲ್ಲಿನ ಮಾಹಿತಿಯನ್ನು ಎಲ್ಲಾ ಮೂಲ ದಾಖಲೆಗಳ ಪರಿಶೀಲನೆ ನಂತರ ಆನ್‌ಲೈನ್‌ನಲ್ಲಿ ದಾಖಲಿಸಲು ಅಂತಿಮ ದಿನಾಂಕ | 25–05–2017 ರವರೆಗೆ (ಬೆಳಿಗ್ಗೆ 10.00 ರಿಂದ ಸಂಜೆ 5.30ರವರೆಗೆ) | **<u>07–06–2017 ರವರೆಗೆ</u> (ಬೆಳಿಗ್ಗೆ 10.00 ರಿಂದ ಸಂಜೆ 5.30ರವರೆಗೆ)** |
| 4. | ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಮೆರಿಟ್ ಪಟ್ಟಿ ಪ್ರಕಟಣೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮತ್ತು ಇಲಾಖೆಯ ಈ ಕೆಳಕಂಡ ವೆಬ್ ಸೈಟ್‌ಗಳ ಮೂಲಕ www.kea.kar.nic.in & www.dte.kar.nic.in ಪ್ರಕಟಿಸಲಾಗುವುದು. | 01–06–2017 ಸಂಜೆ 4.00 ಗಂಟೆಗೆ | **08–06–2017 ಬೆಳಿಗ್ಗೆ 11.00 ಗಂಟೆಗೆ** |
| 5. | ಎಸ್.ಎಸ್.ಎಲ್.ಸಿ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ ಮಾತ್ರ ಮೆರಿಟ್ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ಮೂಲ ದಾಖಲೆಗಳೊಂದಿಗೆ ಪರಿಷ್ಕರಣೆ/ತಿದ್ದುಪಡಿಗೆ ಸಮೀಪದ 121 ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಆನ್‌ಲೈನ್ ಅರ್ಜಿಗಳ ಭರ್ತಿ/ದಾಖಲೆಗಳ ಪರಿಶೀಲನಾ ಕೇಂದ್ರ" ಗಳ ಮೂಲಕ ಮನವಿ ಸಲ್ಲಿಸಲು ಅಂತಿಮ ದಿನಾಂಕ (ಬೇರೆ ಯಾವುದೇ ತಿದ್ದುಪಡಿಗಳಿಗೆ ಅವಕಾಶವಿರುವುದಿಲ್ಲ) | 02–06–2017 & 03–06–2017 | **08–06–2017 ಬೆಳಿಗ್ಗೆ 11.30 ರಿಂದ 09–06–2017ರ ಸಂಜೆ 5.00ರವರೆಗೆ** |
| 6. | ಅಂತಿಮ ಮೆರಿಟ್ ಪಟ್ಟಿ ಪ್ರಕಟಣೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮತ್ತು ಇಲಾಖೆಯ ಈ ಕೆಳಕಂಡ ವೆಬ್ ಸೈಟ್‌ಗಳ ಮೂಲಕ www.kea.kar.nic.in & www.dte.kar.nic.in ಪ್ರಕಟಿಸಲಾಗುವುದು. | 05–06–2017 ಸಂಜೆ 4.00 ಗಂಟೆಗೆ | **10–06–2017 ಮಧ್ಯಾಹ್ನ 2.00 ಗಂಟೆಗೆ** |
| 7. | ಹೊರನಾಡು ಕನ್ನಡಿಗ / ಗಡಿನಾಡು ಕನ್ನಡಿಗ, ಸ್ಕೌಟ್ಸ್&ಗೈಡ್ಸ್ / ಎನ್.ಸಿ.ಸಿ/ಐ.ಟಿ.ಐ/ಐ.ಸಿ.ಐ/ಎ.ಐ ವಿಶೇಷ ಗುಂಪಿನಲ್ಲಿ ಬರುವ ಅಭ್ಯರ್ಥಿಗಳ ಪ್ರವೇಶ ಪ್ರಕ್ರಿಯೆ ದಿನಾಂಕ | 07–06–2017 | **13–06–2017** |
| 8. | ಸ್ಪೋರ್ಟ್ಸ್ ಮತ್ತು ಗೇಮ್ಸ್ / ಜೆ.ಓ.ಸಿ ವಿಶೇಷ ಗುಂಪಿನಲ್ಲಿ ಬರುವ ಅಭ್ಯರ್ಥಿಗಳ ಪ್ರವೇಶ ಪ್ರಕ್ರಿಯೆ ದಿನಾಂಕ | 08–06–2017 | **14–06–2017** |
| 9. | ವಿಶೇಷಚೇತನರು, ಜೆ.ಟಿ.ಎಸ್, ಮಾಜಿ ಸೈನಿಕರು ಮತ್ತು ಸೇವಾನಿರತ ಸೈನಿಕರು ವಿಶೇಷ ಗುಂಪಿನಲ್ಲಿ ಬರುವ ಅಭ್ಯರ್ಥಿಗಳ ಪ್ರವೇಶ ಪ್ರಕ್ರಿಯೆ ದಿನಾಂಕ (ಅಭ್ಯರ್ಥಿಗಳ ಪ್ರವೇಶ ಪ್ರಕಿಯೆಯನ್ನು ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್ ಮೂಲಕ ರಾಜ್ಯದ 19 "ಆನ್‌ಲೈನ್ ಇಂಟರ್‌ಆಕ್ಟೀವ್ ಕೌನ್ಸಲಿಂಗ್ / ಪ್ರವೇಶ ಘಟಕ" ಗಳಲ್ಲಿ ನಡೆಸಲಾಗುವುದು). | 08–06–2017 | **14–06–2017** |
| 10. | ಪ್ರಥಮ ಹಂತದ ಆನ್‌ಲೈನ್ ಇಂಟರಾಕ್ಟೀವ್ ಸೀಟು ಆಯ್ಕೆ ಪ್ರವೇಶ ಪ್ರಕ್ರಿಯೆಯ ಪ್ರಾರಂಭ ದಿನಾಂಕ | 12–06–2017 | **16–06–2017** |
| 11. | ದ್ವಿತೀಯ ಹಂತದ ಆನ್‌ಲೈನ್ ಇಂಟರಾಕ್ಟೀವ್ ಸೀಟು ಆಯ್ಕೆ ಪ್ರವೇಶ ಪ್ರಕ್ರಿಯೆಯ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕ | ಕಾಲಕಾಲಕ್ಕೆ ಈ ಕೆಳಕಂಡ ವೆಬ್ ಸೈಟ್‌ಗಳ ಮೂಲಕ www.kea.kar.nic.in & www.dte.kar.nic.in ಪ್ರಕಟಿಸಲಾಗುವುದು. | |
| 12. | ತೃತೀಯ ಹಂತದ ಆನ್‌ಲೈನ್ ಇಂಟರಾಕ್ಟೀವ್ ಸೀಟು ಆಯ್ಕೆ ಪ್ರವೇಶ ಪ್ರಕ್ರಿಯೆಯ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕ | | |
| 13. | ನಾಲ್ಕನೇ ಹಂತದ ಆನ್‌ಲೈನ್ ಇಂಟರಾಕ್ಟೀವ್ ಸೀಟು ಆಯ್ಕೆ ಪ್ರವೇಶ ಪ್ರಕ್ರಿಯೆಯ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕ | | |
| 14. | ಐದನೇ ಹಾಗೂ ಕೊನೆಯ ಆನ್‌ಲೈನ್ ಇಂಟರಾಕ್ಟೀವ್ ಸೀಟು ಆಯ್ಕೆ ಪ್ರವೇಶ ಪ್ರಕ್ರಿಯೆಯ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕ | | |

ಸೂಚನೆ:

1. ಮೇಲೆ ನಿಗದಿಪಡಿಸಿರುವ ಆನ್‌ಲೈನ್ ಇಂಟರ್‌ಆಕ್ಟೀವ್ ಕೌನ್ಸಿಲಿಂಗ್ ದಿನಾಂಕ ಮತ್ತು ಅಭ್ಯರ್ಥಿಗಳ ಆಯ್ಕೆ ಬಗ್ಗೆ ನಿಗಧಿಪಡಿಸಿದ ಆನ್‌ಲೈನ್ ಇಂಟರ್‌ಆಕ್ಟೀವ್ ಪ್ರವೇಶ ಘಟಕಗಳಿಂದ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ಗಳಿಂದ **www.kea.kar.nic.in** & **www.dte.kar.nic.in** ಸ್ಪಷ್ಟ ಮಾಹಿತಿ ಪಡೆದು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಅಭ್ಯರ್ಥಿಗಳಿಗೆ ಸಂಬಂಧಿಸಿರುತ್ತದೆ.

2. ವಿಶೇಷಚೇತನರು, ಜೆ.ಟಿ.ಎಸ್, ಮಾಜಿ ಸೈನಿಕರು ಮತ್ತು ಸೇವಾನಿರತ ಸೈನಿಕರು ಕೋಟಾದ **ಅಭ್ಯರ್ಥಿಗಳ ಪ್ರವೇಶ ಪ್ರಕಿಯೆಯನ್ನು ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್ ಮೂಲಕ ರಾಜ್ಯದ 19 "ಆನ್‌ಲೈನ್ ಇಂಟರ್‌ಆಕ್ಟೀವ್ ಕೌನ್ಸಲಿಂಗ್ / ಪ್ರವೇಶ ಘಟಕ" (Online Interactive Counselling cum Admission Nodal Center)ಗಳಲ್ಲಿ ದಿನಾಂಕ:14-06-2017ರಂದು ಪೂರ್ವಾಹ್ನ 11.00 ಗಂಟೆಗೆ ನಡೆಸಲಾಗುವುದು. ಎಲ್ಲಾ ಮೂಲ ದಾಖಲೆಗಳೊಂದಿಗೆ ಖುದ್ದಾಗಿ ಹಾಜರಾಗಿ ಸೀಟು ಆಯ್ಕೆ ಮಾಡಿಕೊಳ್ಳುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.**

3. ಸ್ಕೌಟ್ಸ್ / ಗೈಡ್ಸ್, ಹೊರನಾಡು ಕನ್ನಡಿಗ ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳ ಸೀಟು ಆಯ್ಕೆ ಪ್ರಕ್ರಿಯೆಯನ್ನು **ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ತಾಂತ್ರಿಕ ಭವನ, ಅರಮನೆ ರಸ್ತೆ, ಬೆಂಗಳೂರು – 560001. ಇಲ್ಲಿ ದಿನಾಂಕ:13-06-2017ರಂದು ಪೂರ್ವಾಹ್ನ 11.00 ಗಂಟೆಗೆ ನಡೆಸಲಾಗುವುದು.** ಅರ್ಹ ಅಭ್ಯರ್ಥಿಗಳು ಈ ಅಂಶವನ್ನು ತಪ್ಪದೇ ಗಮನಿಸಿ ಸಂಬಂಧಿಸಿದ ಎಲ್ಲ ಮೂಲ ದಾಖಲೆಗಳೊಂದಿಗೆ ಸಂದರ್ಶನಕ್ಕೆ ಹಾಜರಾಗುವುದು.

4. ಎನ್.ಸಿ.ಸಿ/ಐ.ಟಿ.ಐ/ಐ.ಸಿ.ಐ/ಎ.ಐ ಕೋಟಾದ ಪ್ರವೇಶ ಪ್ರಕ್ರಿಯೆಯನ್ನು **ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್, ಬೆಂಗಳೂರು – 560 001 ಇಲ್ಲಿ ದಿನಾಂಕ: 13-06-2017ರಂದು ಪೂರ್ವಾಹ್ನ 11,00 ಗಂಟೆಗೆ ನಡೆಸಲಾಗುವುದು.**

5. ಸ್ಪೋರ್ಟ್ಸ್ & ಗೇಮ್ಸ್ ಕೋಟಾದ ಪ್ರವೇಶ ಪ್ರಕ್ರಿಯೆಗಳನ್ನು **ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು – 560 001 ಇಲ್ಲಿ ದಿನಾಂಕ: 14-06-2017ರಂದು ಪೂರ್ವಾಹ್ನ 11.00 ಗಂಟೆಗೆ ನಡೆಸಲಾಗುವುದು.**

6. ಜೆ.ಓ.ಸಿ ಕೋಟಾದ ಪ್ರವೇಶ ಪ್ರಕ್ರಿಯೆಗಳನ್ನು **ಸರ್ಕಾರಿ ಜಿ.ಆರ್.ಐ.ಸಿ.ಪಿ ಪಾಲಿಟೆಕ್ನಿಕ್, ಬೆಂಗಳೂರು – 560 001 ಇಲ್ಲಿ ದಿನಾಂಕ: 14-06-2017ರಂದು ಪೂರ್ವಾಹ್ನ 11.00 ಗಂಟೆಗೆ ನಡೆಸಲಾಗುವುದು.**

7. **ಮಾಹಿತಿ ಪುಸ್ತಕದಲ್ಲಿರುವ ಅನುಬಂಧ-5ರಲ್ಲಿ ಸೂಚಿಸಿರುವಂತೆ ಸಂಬಂಧಪಟ್ಟ ವಿಶೇಷ ಗುಂಪಿಗೆ ಕೋರ್ಸುವಾರು ಮತ್ತು ಪಾಲಿಟೆಕ್ನಿಕ್‌ವಾರು ಸರ್ಕಾರ ನಿಗಧಿಪಡಿಸಿರುವ ಪ್ರವೇಶ ಸ್ಥಾನಗಳಿಗೆ ಮಾತ್ರ ಪ್ರವೇಶ ಲಭ್ಯವಿರುತ್ತದೆ.**

8. ವಿ.ಸೂ:-

   I. **ನಿಗದಿಪಡಿಸಿರುವ 19 "ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್ ಕೇಂದ್ರ / ಪ್ರವೇಶ ಘಟಕ"ಗಳ ಜೊತೆಗೆ ಅಭ್ಯರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ "ಆನ್‌ಲೈನ್ ಇಂಟರ್‌ಆಕ್ಟೀವ್ ಕೌನ್ಸಲಿಂಗ್ / ಪ್ರವೇಶ ಘಟಕ" ಗಳನ್ನು ಹೆಚ್ಚಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು** www.dte.kar.nic.in & www.kea.kar.nic.in **ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಲಾಗುವುದು.**

   II. **ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯ ಮೇರೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಭರ್ತಿ ಮಾಡಿದ ಅರ್ಜಿಯನ್ನು ಸ್ವೀಕರಿಸಲು ಮೇಲ್ಕಂಡಂತೆ ದಿನಾಂಕವನ್ನು ವಿಸ್ತರಿಸಲಾಗಿದೆ. ಪ್ರಯುಕ್ತ, ಇನ್ನು ಮುಂದೆ ಪ್ರಥಮ ಡಿಪ್ಲೋಮಾ ಪ್ರವೇಶಾವಧಿಯನ್ನು ಪುನಃ ವಿಸ್ತರಿಸಲಾಗುವುದಿಲ್ಲ ಎಂಬ ಮಾಹಿತಿಯನ್ನು ವಿದ್ಯಾರ್ಥಿಗಳು ಹಾಗೂ ಪೋಷಕರುಗಳ ಗಮನಕ್ಕೆ ತರಲಾಗಿದೆ.**

**ನಿರ್ದೇಶಕರು**